# ‘ಅಜ್ಞಾತ ಕನ್ಯೆ’

■ ಚಿತ್ರ ಬರಹ:
ಸಿ.ಎಸ್.ಸುರೇಶ್





ಸೂರ್ಲಬ್ಬಿ ಜಲಪಾತ ಕೊಡಗಿನ ಜಲಧಾರೆಗಳ ಸಾಲಿಗೆ ಸೇರುವ ಮತ್ತೊಂದು ಜಲಪಾತ. ಮಡಿಕೇರಿಯಿಂದ ಹೊರಟು ಮಾದಾಪುರದ ಮೂಲಕ ಸೂರ್ಲಬ್ಬಿ ಎಂಬ ಊರು ತಲುಪುತ್ತಿದ್ದಂತೆಯೇ ಈ ಜಲಪಾತ ಕಾಣಸಿಗುತ್ತದೆ. ರಸ್ತೆಯಂಚಿನಲ್ಲೇ ಇರುವ ಈ ಜಲಪಾತ ಈಗ ಹಾಲಿನ ಹೊಳೆ.

ಕಣಿವೆಯೊಳಗಿನಿಂದ ಬಂಡೆಗಲ್ಲುಗಳ ಮೇಲೆ ಹರಿದು ಧುಮ್ಮಿಕ್ಕುವ ಈ ಜಲಪಾತ ಕಣ್ಣಿಗೆ ಹಬ್ಬ. ಕಾನನವನ್ನು ಸೀಳಿ ಸ್ಥಳೀಯರು ಹೆಸರಿಸಿರುವ ಮೇದುರ ಹೊಳೆ ವಿಶಾಲವಾದ ಬಂಡೆಗಳ ನಡುವಿನಿಂದ ಧುಮುಕಿ ಸೃಷ್ಟಿಸಿರುವ ಈ ಜಲಪಾತ ಕಣ್ಣು ಹಾಯಿಸಿದಷ್ಟು ದೂರವೂ ಹಾಲಿನ ಹೊಳೆಯೇ.

ಮಾದಾಪುರ– ಸೂರ್ಲಬ್ಬಿ ನಡುವಿನ ಕಿರಿದಾದ ರಸ್ತೆಯ ಬದಿಯಲ್ಲೇ ಇದೆ ಈ ಜಲಪಾತ. ಮಡಿಕೇರಿಯಿಂದ ಸೋಮವಾರಪೇಟೆಗೆ ತೆರಳುವ ದಾರಿಯಲ್ಲಿ ಮಾದಾಪುರದಿಂದ ಎಡಕ್ಕೆ ಹೊರಳಿದರೆ ಸೂರ್ಲಬ್ಬಿಗೆ ಹೋಗುವ ದಾರಿ ಸಿಗುತ್ತದೆ. ಮಡಿಕೇರಿಯಿಂದ 40 ಕಿಮೀ. ಮಾದಾಪುರದಿಂದ 18 ಕಿ.ಮೀ ದೂರದಲ್ಲಿದೆ. ಪಶ್ಚಿಮ ಘಟ್ಟಗಳ ದಟ್ಟ ಅರಣ್ಯದ ನಡುವೆ ಹಾವಿನಂತೆ ಹರಿದುಹೋಗುವ ರಸ್ತೆಯ ಅಂಚಿನಲ್ಲೇ ಕಣಿವೆಯಿಂದ ಹರಿದು ಬರುವ ಹಾಲಿನ ಹೊಳೆ. ಭೋರ್ಗರೆದು ಧುಮ್ಮಿಕ್ಕುವ ಜಲಧಾರೆ ರಸ್ತೆಯನ್ನು ಕ್ರಮಿಸಿ ಬಂಡೆಗಲ್ಲುಗಳ ಮೇಲೆ ಇಳಿದಿಳಿದು ಸಾಗುತ್ತದೆ.

ಗರ್ವಾಲೆ ಪಂಚಾಯ್ತಿ ವ್ಯಾಪ್ತಿಯ ಸೂರ್ಲಬ್ಬಿ ಗ್ರಾಮದಲ್ಲಿ ಸೂರ್ಲಬ್ಬಿ, ಕುಂಬಾರಗಡಿಗೆ ಕಿಕ್ಕರಳ್ಳಿ ಹಾಗೂ ಮಂಕ್ಯ ಪುಟ್ಟ ಗ್ರಾಮಗಳು. ಅಂದಾಜು 300 ಮನೆಗಳಿವೆ. ದಿನಕ್ಕೆರಡು ಬಾರಿ ಸರ್ಕಾರಿ ಬಸ್ ಈ ಮಾರ್ಗದಲ್ಲಿ ಸಂಚರಿಸುತ್ತಿದ್ದು, ಒಂದು ಖಾಸಗಿ ಬಸ್ಸೂ ಓಡುತ್ತದೆ. ವಾರ್ಷಿಕವಾಗಿ 250 ಇಂಚಿಗಿಂತಲೂ ಅಧಿಕ ಮಳೆಯಾಗುವ ಪುಷ್ಪಗಿರಿ ಬೆಟ್ಟಶ್ರೇಣಿಯ ತಪ್ಪಲಿನಲ್ಲಿರುವ ಸೂರ್ಲಬ್ಬಿಯ ಹಸಿರು ಕಾನನದಲ್ಲಿ ಹರಿದು ಬರುವ ಜಲಧಾರೆ ಹಾಸುಗಲ್ಲಿನ ಬಂಡೆಗಲ್ಲಿನ ಮೇಲೆ ಶ್ವೇತಕನ್ಯೆಯಂತೆ ಕೆಳಗಿಳಿಯುತ್ತದೆ. ನಂತರ ಹಲವಾರು ಜಲಧಾರೆಗಳು ಕೂಡಿಕೊಂಡು ತನ್ನ ಹರಿವು ಹೆಚ್ಚಿಸಿಕೊಂಡು ಸಾಗುತ್ತದೆ. ಪ್ರವಾಸಿಗರಿಗೆ ತೆರಳಲು ಅನಾನುಕೂಲವೆನಿಸಿದರೂ, ಹಾಲಿನ ಹೊಳೆ ದಟ್ಟ ಮರಗಿಡಗಳ ನಡುವೆ ಬಂಡೆಗಲ್ಲುಗಳ ಮೇಲೆ ಧುಮುಕಿ ಹಾದು ಬರುವ ಸೊಬಗನ್ನು ನೋಡುವುದೇ ಆನಂದ.

ಸೂರ್ಲಬ್ಬಿ ಜಲಪಾತದ ಮೂಲ ಹುಡುಕುತ್ತಾ ಕಾನನದ ನಡುವೆ ಸಾಗಿದರೆ ಬಂಡೆಗಲ್ಲುಗಳ ಮೇಲಿನಿಂದ ಧುಮ್ಮಿಕ್ಕುವ ಜಲಧಾರೆಯ ಸೊಬಗು ಮತ್ತಷ್ಟು ಕಾಣಸಿಗುತ್ತದೆ. ಆದರೆ ಮಳೆಗಾಲದಲ್ಲಿ ಕಾಡುವ ಜಿಗಣೆಗಳ ಉಪಟಳವನ್ನು ಸಹಿಸಿಕೊಳ್ಳಬೇಕು. ಸೂರ್ಲಬ್ಬಿಯಿಂದ ಮುಂದೆ 20ಕಿ.ಮೀ. ಸಾಗಿದರೆ ಶಾಂತಳ್ಳಿ ಗ್ರಾಮ ಸಿಗುತ್ತದೆ. ಪಶ್ಚಿಮ ಘಟ್ಟಗಳ ದಟ್ಟ ಅರಣ್ಯದ ನಡುವೆ ಹಾವಿನಂತೆ ಹರಿದುಹೋಗುವ ದಾರಿಯಲ್ಲಿ ಸಾಗಿದರೆ ಕಾನನವನ್ನು ಸೀಳಿ ಕುಮಾರಧಾರ ನದಿ ವಿಶಾಲವಾದ ಬಂಡೆಗಳ ನಡುವಿನಿಂದ ಧುಮ್ಮಿಕ್ಕಿ ಮಲ್ಲಹಳ್ಳಿ ಜಲಪಾತವನ್ನು ಸೃಷ್ಟಿಸುತ್ತದೆ. ಈ ಜಲಪಾತ ಕಣ್ಣು ಹಾಯಿಸಿದಷ್ಟೂ ದೂರವೂ ಹಾಲಿನ ಹೊಳೆಯೇ. ಹಸಿರು ವನಸಿರಿಯ ನಡುವೆ ಮಲ್ಲಹಳ್ಳಿ, ಹೆಗ್ಗಡೆಮನೆ ಕವಲು ರಸ್ತೆ ಇರುವ ನಾಮಫಲಕದ ಸ್ಥಳದಾಟಿ ಮುಂದಕ್ಕೆ ಸಾಗಿದರೆ ಕಾಣಿಸುವುದು ಕಣಿವೆ.

ಪ್ರವಾಸಿಗರ ಅನುಕೂಲಕ್ಕಾಗಿ ಜಲಪಾತದ ಬಳಿಗೆ ರಸ್ತೆ ನಿರ್ಮಿಸುವ ಪ್ರಯತ್ನ ನಡೆಯುತ್ತಿದೆ. ವಾಹನ ನಿಲುಗಡೆಗೆ ಅವಕಾಶವಿದೆ. ಕೊಡಗಿನ ಗಡಿಭಾಗದ ಪುಷ್ಪಗಿರಿ (1712 ಮೀ), ಕುಮಾರ ಪರ್ವತ (1399 ಮೀ) ಶ್ರೇಣಿಗಳ ಕಣಿವೆಗಳ ಸೊಬಗನ್ನು ಸವಿಯಲು ಮಳೆಗಾಲದ ನಂತರದ ದಿನಗಳ ಸಮಯ ಅತ್ಯಂತ ಸೂಕ್ತ.